## ಬಾಲ್ಕನಿ

# ರಮ್ಯ ಸಿಂಗಪೂರ್ ಹೋಗ್ತಾರಾ?



**ಸು**ದೀಪ್ ನಿರ್ದೇಶಿಸಿ, ಅಭಿನಯಿಸುತ್ತಿರುವ 'ಜಸ್ಟ್ ಮಾತ್ ಮಾತಲಿ' ಚಿತ್ರ ಇನ್ನೇನು ಮುಕ್ತಾಯದ ಹಂತದಲ್ಲಿದೆ. ಈಗಾಗಲೇ 34 ದಿನಗಳ ಚಿತ್ರೀಕರಣ ಪೂರ್ಣಗೊಂಡಿದ್ದು, ಇನ್ನು 13 ದಿನಗಳ ಶೂಟಿಂಗ್ ಮಾತ್ರ ಬಾಕಿ. ಆ ಪೈಕಿ ಮುಂದಿನ ವಾರ ಚಿತ್ರತಂಡ, ಸಿಂಗಪೂರಕ್ಕೆ ಪ್ರಯಾಣ ಬೆಳೆಸಲಿದೆ.

ಮೊನ್ನೆ ಮೊನ್ನೆಯಷ್ಟೇ ಅಭಿಮಾನ್ ಸ್ಟುಡಿಯೋನಲ್ಲಿ 'ಎಲ್ಲೋ ಜಿನುಗುವ ನೀರು' ಹಾಡಿನ ಚಿತ್ರೀಕರಣ ನಡೆಯಿತು. ಅಂದಮೇಲೆ, ಇಲ್ಲೇ ನಾಯಕಿ ರಮ್ಯ ಹಾಗೂ ನೃತ್ಯ ನಿರ್ದೇಶಕ ಹರ್ಷ ನಡುವೆ ವಾಗ್ಯುದ್ಧ ನಡೆದಿದ್ದು ಅಂತ ಅಂದುಕೊಂಡರೆ, ನಿಮ್ಮ ಅನಿಸಿಕೆ ಸರಿ! ಆಮೇಲೆ ಅದು ವಿವಾದಕ್ಕೆ ಕಾರಣವಾಗಿ, ರಮ್ಯ ಕ್ಷಮೆಯಾಚಿಸಿದ್ದೂ ಆಯಿತು. ಆದರೆ ತದನಂತರ ಹೇಳಿಕೆ ನೀಡಿದ ಸುದೀಪ್, 'ಇನ್ನುಳಿದ ಸನ್ನಿವೇಶಗಳನ್ನು ರಮ್ಯ ಅವರನ್ನು ಬಿಟ್ಟು ಚಿತ್ರೀಕರಿಸುತ್ತೇನೆ' ಎಂದಿದ್ದರು. ಹಾಗಾಗಿ, ಈಗ ಉದ್ಭವಿಸಿರುವ ಪ್ರಶ್ನೆಯೆಂದರೆ, ಸಿಂಗಪೂರ ವಿಮಾನದಲ್ಲಿ ರಮ್ಯ ಇರುತ್ತಾರಾ?

ನಾಯಕಿ ಸನ್ನಿವೇಶಗಳಿರುವ ದೃಶ್ಯವನ್ನು ರಮ್ಯ ಇಲ್ಲದೇ ಸುದೀಪ್ ಹೇಗೆ ಚಿತ್ರೀಕರಿಸುತ್ತಾರೆ? ರಮ್ಯ ಕೈಬಿಡುವ ಸಲುವಾಗಿ ಚಿತ್ರಕತೆಗೆ ತಿದ್ದುಪಡಿ ತರುತ್ತಾರೆಯೇ ಅಥವಾ ನಿರ್ಮಾಪಕರು ರಮ್ಯ ಬೇಕೇ ಬೇಕು ಎಂದು ಹಠ ಹಿಡಿದರೆ, ಸುದೀಪ್ ಏನು ಮಾಡುತ್ತಾರೆ... ಎಂಬುದು ಈಗ ಗಾಂಧಿನಗರದಲ್ಲಿ ಚರ್ಚೆಯಾಗುತ್ತಿರುವ ವಿಷಯ. ಇದಕ್ಕೆ ಪೂರಕವಾಗಿ, 'ನಿರ್ಮಾಪಕರು ಕರೆದರೆ ಚಿತ್ರೀಕರಣದಲ್ಲಿ ನಾನು ಪಾಲ್ಗೊಳ್ಳುವುದಾಗಿ' ರಮ್ಯ ಘೋಷಿಸಿದ್ದಾರೆ. ಕೊನೆಗೆ ವಿವಾದವೇ ಬೇಡವೆಂದು 'ಜಸ್ಟ್' ಸಂಧಾನ ನಡೆದರೂ ಆಶ್ಚರ್ಯವಿಲ್ಲ.

# ವಿದೇಶಕ್ಕೆ ಬೆಟ್ಟದಪುರದ ಮಕ್ಕಳು!



**ಕೋ**ಡ್ಲು ರಾಮಕೃಷ್ಣ ನಿರ್ದೇಶನದ 'ಬೆಟ್ಟದಪುರದ ದಿಟ್ಟ ಮಕ್ಕಳು' ಚಿತ್ರ ದಕ್ಷಿಣ ಏಷ್ಯಾ ಚಲನ ಚಿತ್ರೋತ್ಸವದಲ್ಲಿ ಭಾಗವಹಿಸುವುದಕ್ಕೆ ಗೊತ್ತಾಗಿದೆ. ಸಿಯಾಟಲ್‌ನಲ್ಲಿ ಅಕ್ಟೋಬರ್ 2ರಿಂದ ಎರಡು ದಿನಗಳ ಕಾಲ ನಡೆಯುವ ಫೆಸ್ಟಿವಲ್‌ನಲ್ಲಿ ಈ ಮಕ್ಕಳ ಚಿತ್ರ ಪ್ರದರ್ಶನಗೊಳ್ಳಲಿದೆ.

ಸಾಹಿತಿ ನಾ. ಡಿಸೋಜ ಅವರ ಕತೆಯನ್ನಾಧರಿಸಿದ ಈ ಚಿತ್ರದ ನಿರ್ಮಾಪಕರು ಎನ್‌ಆರ್‌ಐ ಕನ್ನಡಿಗ ಹರ್ಷ ರಾಮ್. ಅಲ್ಲದೇ, ಪ್ರಮುಖ ಪಾತ್ರವೊಂದರಲ್ಲಿ ಹರ್ಷ ಕಾಣಿಸಿಕೊಂಡಿದ್ದಾರೆ. ಗಣಿಗಾರಿಕೆಯನ್ನು ಧಿಕ್ಕರಿಸಿ ಬೆಟ್ಟದಪುರದ ಕೆಲ ದಿಟ್ಟ ಮಕ್ಕಳು ನಡೆಸುವ ಹೋರಾಟದ ಕತೆಯನ್ನು ಚಿತ್ರ ಒಳಗೊಂಡಿದೆ. ಅಂದಹಾಗೆ, ಇತ್ತೀಚೆಗಷ್ಟೇ ಬೆಂಗಳೂರು ಪಿವಿಆರ್ ಥಿಯೇಟರ್‌ನಲ್ಲಿ 'ಬೆಟ್ಟದಪುರದ ದಿಟ್ಟ ಮಕ್ಕಳು' ಚಿತ್ರ ಬಿಡುಗಡೆಯಾಗಿತ್ತು.

## ಫ್ಲಾ ್ಯಷ್ ಬ್ಯಾಕ್ / ಅನಾದಿ

## ದೂರದರ್ಶನ ಮತ್ತು

### ಬೆಂಗಳೂರು ದೂರದರ್ಶನ

ಬೆಳಗ್ಗೆ 5.30: ಕೃಷಿ ದರ್ಶನ, 6: ದರ್ಶನ, 6.30: ಮಾರ್ಗದರ್ಶನ, 6 ವಚನಾಮೃತ, 7: ಬೆಳಗು, 7.45: ವಾರ್ತೆ 8: ಹಲೋ ಗೆಳೆಯರೆ, 3: ವಾರ್ತೆ 3.05: ಕಥಾಸರಿತ, 3.30: ಜೀವನ್ಮುಖಿ, 4 ಕುಂತಿ, 4.30: ಹೃದಯ ಸಾಕ್ಷಿ, 5: ಗಂಗೊ 5.30: ನೆನಪಿನ ನಾವೆ, 6: ಕೃಷಿ ದಶ 6.30: ನಿರೀಕ್ಷಾ, 6.45: ಚಿಣ್ಣರ ಕರೆ, ವಾರ್ತೆಗಳು, 7.15: ನಗುನಗುತ್ತಾ ನಲಿ, 7 ಮಧುರ ಮಧುರವೀ ಮಂಜುಳಗಾನ.

### ಚಂದನ

ಬೆಳಗ್ಗೆ 5.30: ಕೃಷಿದರ್ಶನ, 9: ತಿರು ಬ್ರಹ್ಮೋತ್ಸವದ ನೇರಪ್ರಸಾರ, 9.30: ಮಂಜರಿ, 10: ಟೆಲಿಶಾಪ್, 10.30: ಶಾಸ್ತ್ರಿ ಸಂಗೀತ, 11: ವಾರ್ತೆಗಳು, 11.05: ದ ವರದಿ, 11.30: ಟೆಲಿಶಾಪಿಂಗ್, 12: ಡಾಕ್ಟರ್, 1: ವಾರ್ತೆಗಳು, 1.15: ಸಂಗೀತ, 1.30: ನ್ಯಾರೋಕಾಸ್ಟಿಂಗ್, ಟೆಲಿಬ್ರಾ..ಂಡ್, 2.30: ಟೆಲಿಶಾಪಿಂಗ್,